ಒದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಶ್ಲಾಘನೀಯ ನಿರ್ಧಾರ

ಸರಕಾರವು ಇತ್ತೀಚಿನ ಬಜೆಟ್ ನಲ್ಲಿ ಸರಕಾರಿ ಶಾಲಾ ಶಿಕ್ಷಕರು ಹಾಗೂ ಮಕ್ಕಳ ಹಾಜರಾತಿಗೆ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಜಾರಿಗೊಳಿಸುವುದಾಗಿ ಘೋಷಿಸಿದೆ.ಇದೊಂದು ಶ್ಲಾಘನೀಯ ನಿರ್ಧಾರವಾಗಿದೆ.ಯಾಕೆಂದರೆ ಬಯೋಮೆಟ್ರಿಕ್ ವ್ಯವಸ್ಥೆಯಿಂದ ಶಾಲೆಗಳಲ್ಲಿ ಮಕ್ಕಳ 'ನಿಖರ ದಾಖಲಾತಿ' ಸಿಗುವುದರ ಜೊತೆಗೆ ದ್ವಿ ದಾಖಲಾತಿ ಹಾಗೂ ಗೈರು ಹಾಜರಿ ಸಮಸ್ಯೆಗೆ ಶಾಶ್ವತ ಪರಿಹಾರವೂ ಸಿಗಲಿದೆ.ಅಲ್ಲದೇ ಇದರಿಂದ ಮಧ್ಯಾಹ್ನದ ಉಪಹಾರ,ಕ್ಷೀರ ಭಾಗ್ಯ,ಸಮವಸ್ತ್ರ, ಶೂ ಮತ್ತು ಸಾಕ್ಸ್ ವಿದ್ಯಾರ್ಥಿ ವೇತನ ಹಾಗೂ ಇನ್ನಿತರ ಯೋಜನೆಗಳಲ್ಲಿ 'ಅರ್ಹ ವಿದ್ಯಾರ್ಥಿ'ಗಳಷ್ಟೆ ಫಲಾನುಭವಿಗಳಾಗುವುದರಿಂದ ಸರಕಾರಕ್ಕೆ ನೂರಾರು ಕೋಟಿ ಹಣವೂ ಉಳಿತಾಯವಾಗಲಿದೆ. ಇದರಿಂದ ಸಮಯ ಪಾಲನೆ ಅನಿವಾರ್ಯವಾಗುವುದರಿಂದಕೆಲ ಶಿಕ್ಷಕರು ಹಾಗೂ ಮಕ್ಕಳ ಅನಗತ್ಯ ಗೈರು ಹಾಜರಿಗೂ ಕಡಿವಾಣ ಬೀಳಲಿದೆ.ಒಟ್ಟಾರೆಯಾಗಿ ಶಿಕ್ಷಣ ಇಲಾಖೆಯ ಕಾರ್ಯದಕ್ಷತೆ ಹೆಚ್ಚಿಸುವಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಲಿದೆ.ಇನ್ನು ಸರಕಾರದ ಬೇರೆ ಬೇರೆ ಇಲಾಖೆಯ ಕಚೇರಿಗಳಲ್ಲಿ ಕೆಲ ಅಧಿಕಾರಿಗಳು,ನೌಕರರು ಸಾರ್ವಜನಿಕರಿಗೆ ಸಮಯಕ್ಕೆ ಸರಿಯಾಗಿ ಸಿಗುತ್ತಿಲ್ಲ ಎಂಬ ದೂರುಗಳಿವೆ.ಆದುದರಿಂದ ಎಲ್ಲಾ ಸರಕಾರಿ ಕಚೇರಿಗಳಲ್ಲೂ ಹಾಗೂ ಸರಕಾರದಿಂದ ಅನುದಾನ ಪಡೆಯುತ್ತಿರುವ ಎಲ್ಲ ಸಂಸ್ಥೆಗಳಲ್ಲೂ ಸಮಯ ಪಾಲನೆಯ ಜೊತೆಗೆ ಸೇವೆಯಲ್ಲಿ ಶಿಸ್ತನ್ನು ಮೂಡಿಸಲು ಬಯೋಮೆಟ್ರಿಕ್ ವ್ಯವಸ್ಥೆಯನ್ನು ಕಡ್ಡಾಯಗೊಳಿಸ ಬೇಕಾಗಿದೆ.ಈ ಮೂಲಕ ಆಡಳಿತ ವ್ಯವಸ್ಥೆಯಲ್ಲಿ 'ಕಾರ್ಯಕ್ಷಮತೆ' ಹೆಚ್ಚುವಂತಾಗಿ ಸಾರ್ವಜನಿಕರಿಗೆ ಅನುಕೂಲವಾಗುವಂತಾಗಲಿ.

ಪ್ರಶಾಂತ ಎಂ. ಕುನ್ನೂರ,

ಗುಣಮಟ್ಟದ ಶಿಕ್ಷಣ ನೀಡಿ

ಈಗಾಗಲೇ ಶಾಲೆಗಳು ಪ್ರಾರಂಭವಾಗಿವೆ. ಪಠ್ಯಪುಸ್ತಕ ಹಾಗೂ ಸಮವಸ್ತ್ರಗಳನ್ನು ವಿತರಿಸಲಾಗುತ್ತಿದೆ. ಜತೆಗೆ ಉಚಿತ ಬಸ್ ಪಾಸ್, ಹಾಲು, ಬಿಸಿ ಊಟವನ್ನು ನೀಡುತ್ತಿದ್ದಾರೆ. ಇವುಗಳೆಲ್ಲವನ್ನು ಅಚ್ಚು-ಕಟ್ಟಾಗಿ ಸರಕಾರವು ಒದಗಿಸುತ್ತಿರುವುದು ಸಂತೋಷದ ವಿಚಾರವಾಗಿದೆ. ಆದರೆ ಪ್ರಾಥಮಿಕ ಹಂತದಿಂದಲೇ ಗುಣಮಟ್ಟ ಶಿಕ್ಷಣವನ್ನು ಪೂರೈಸುವಲ್ಲಿ ವಿಫಲವಾಗಿದೆ. ಹೇಗೆಂದರೆ ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿದ್ಯಾರ್ಥಿಗಳನ್ನು ಹೊಡೆಯಬಾರದು ಎಂಬ ಆದೇಶವನ್ನು ನಮ್ಮ ಸರಕಾರ ಕೆಲವು ವರ್ಷಗಳ ಹಿಂದೆ ಜಾರಿಗೊಳಿಸಿದೆ. ಇದರಿಂದ ಶಿಕ್ಷಕರಿಗೆ ಮಕ್ಕಳನ್ನು ಶಿಸ್ತಿನಲ್ಲಿ ಇಡುವುದು ಕಷ್ಟ ಕಾರ್ಯವಾಗಿದೆ. ಒಂದು ವೇಳೆ ಹೊಡೆದರೆ ಮಕ್ಕಳ ಪಾಲಕರು ಶಾಲೆಗೆ ಬಂದು ಗಲಾಟೆ ಮಾಡುತ್ತಾರೆ. ಅದರಿಂದ ಮುಕ್ತವಾಗಿ ಮಕ್ಕಳೊಂದಿಗೆ ಸಂವಾದ ಹಾಗೂ ಬೋಧನೆ ಮಾಡಲು ಶಿಕ್ಷಕರು ಹಿಂಜರಿಯುತ್ತಾರೆ. ಪ್ರಾಥಮಿಕ ಹಂತದಲ್ಲಿ ಯೋಗ್ಯವಿಲ್ಲದ ಅತಿಥಿ ಶಿಕ್ಷಕರನ್ನು ಶಿಫಾರಸ್ಸಿನ ಮೇಲೆ ತಾತ್ಕಾಲಿಕವಾಗಿ ನೇಮಿಸಿಕೊಳ್ಳುವುದು ಸೂಕ್ತವಲ್ಲ. ಎಲ್ಲಾ ಶಾಲೆಗಳಲ್ಲಿ ಮುಖ್ಯ ಶಿಕ್ಷಕರೇ ಬಿಸಿಊಟದ ಕಾರ್ಯವನ್ನು ಗಮನಿಸುವುದರಿಂದ ಬೋಧನೆಯನ್ನು ನಿರ್ಲಕ್ಷಿಸುತ್ತಿದ್ದಾರೆ. ಪ್ರಸ್ತುತ ಗ್ರಾಮೀಣ ಪ್ರದೇಶದ ಕೆಲವು ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮುಗಿಸಿದರೂ ಕನ್ನಡವನ್ನು ಓದಲು, ಬರೆಯಲು ಬರುವುದಿಲ್ಲ, ಇದು ಸರಕಾರಿ ಶಾಲೆಗಳ ದಯನೀಯ ಸ್ಥಿತಿ. ಈ ಎಲ್ಲಾ ಬೆಳವಣಿಗೆಗಳು ಒಂದು ಕಡೆಯಾದರೆ, ಮತ್ತೊಂದು ಕಡೆ ನಾಯಿ ಕೊಡೆಗಳಂತೆ ಬೆಳೆಯುತ್ತಿರುವ ಆಂಗ್ಲ ಮಾಧ್ಯಮ ಶಾಲೆಗಳು. ಇದರಿಂದ ಗ್ರಾಮೀಣ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ವಿಫಲಗೊಳ್ಳುತ್ತಿದ್ದಾರೆ. ಆಧುನಿಕ ಯುಗದಲ್ಲಿ ಎಲ್ಲಾ ಪಾಲಕರು ಆಂಗ್ಲ ಮಾಧ್ಯಮದ ಕಡೆ ಆಕರ್ಷಿತರಾಗುತ್ತಿದ್ದಾರೆ. ಇದರಿಂದ ಸರಕಾರಿ ಶಾಲೆಗಳನ್ನು ಉಳಿಸುವ ಕಡೆಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಗಮನ ಕೇಂದ್ರೀಕರಿಸಬೇಕು.

ನಾಗೇಶ್, ಸಣಾಪುರ.

ಭಟ್ಟರ್ ಸ್ನಾಕ್

- **ಶಶಿಧರ ಹೆಗಡೆ, ಸಿದ್ದಾಪುರ**

ನನಗೆ ನಿಜಗುಣಾನಂದ ಸ್ವಾಮೀಜಿ ಭಾಷಣ ಹತ್ತುನಿಮಿಷ ಕೇಳುವ ಆಸೆ, ಏನು ಮಾಡಲಿ?

ಅರ್ಧಗಂಟೆ ಮಾತಿನ ನಂತರ ಆ ಸ್ವಾಮೀಜಿ ಭಾಷಣ ಆರಂಭವಾಗುತ್ತದಲ್ಲ!

- **ನೇರಳಗುಡ್ಡ ಶಿವಕುಮಾರ, ಶಿರಾ**

ಸೆಕ್ಸ್‌ಗೂ, ವಯಸ್ಸಿಗೂ ಏನು ಸಂಬಂಧ ಭಟ್ರೇ?

ಸ್ವಲ್ಪ ತಾಳು, ಮಾಜಿ ಸಚಿವ ಮೇಟಿ ಕೇಳಿ ಹೇಳ್ತೀನಿ!

- **ಬಾದಾಮಿ ಶಂಕರಪ್ಪ, ಕೆರೂರು**

ಯೋಗರಾಜಭಟ್ರು ಈಗ ಏನು ಮಾಡುತ್ತಿದ್ದಾರೆ ಗೊತ್ತಾ?

- 'ಮುಂಗಾರು ಮಳೆ' ನೋಡುತ್ತಿರಬಹುದು!

- **ಸಾತೊಡ್ಡಿ ಪ್ರಭಾಕರ, ಯಲ್ಲಾಪುರ**

ನನ್ನ ಹೆಂಡತಿ ನನ್ನನ್ನು ನಂಬುತ್ತಿಲ್ಲ, ಪರಿಹಾರ ಹೇಳ್ತೀರಾ?

- ಮುಗೀತು ನಿನ್ನ ಕತೆ, ಹೆಚ್ಚೆಂದರೆ ನಂಬುವಂತೆ ನಟಿಸು ಎಂದು ಮನವಿ ಮಾಡಿಕೊಳ್ಳುತ್ತೇನೆ!

- **ಕೆರಾಳ ಯಶೋಧರ, ಪುತ್ತೂರು**

ಮದುವೆಯಾಗುವುದರ ಒಂದು ಲಾಭವಾದರೂ ಏನು ಹೇಳಿ ಪ್ಲೀಸ್?

- ನೀನು ಕನಿಷ್ಠ ಮಂಚದ ಒಂದು ಬದಿಯಂತೂ ಕೆಳಗೆ ಬೀಳಲಾರೆ ಬಿಡು!

- **ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ**

ಇಲ್ಲೊಬ್ಬಳು ಸದಾ ನೆಲವನ್ನೇ ನೋಡಿಕೊಂಡು ನಡೆಯುತ್ತಾಳಲ್ಲ, ಏಕೆ?

- ಇನ್ನೂ ಪ್ರಾಯ ಬಂದಿರಲಿಕ್ಕಿಲ್ಲ ಹಾಗಾದ್ರೆ!

- **ಎಂ.ಡಿ.ಶರಣ ಅಪ್ಪಾಜಿ, ಕೆ.ಆರ್.ಪೇಟೆ**

ನನಗೆ ಮೊಯಿಲಿ ಮಹಾಕಾವ್ಯ ಅಂದ್ರೆ ಪಂಚಪ್ರಾಣ ಗೊತ್ತಾ?

- ಅದಕ್ಕೆ ನಿನ್ನನ್ನು ಇನ್ನೂ ಡಾಕ್ಟರ್ ನಿಮ್ಹಾನ್ಸ್‌ನಿಂದ ಡಿಸ್‌ಚಾರ್ಜ್ ಮಾಡದಿರುವುದು!

- **ಎಸ್.ಟಿ.ಕೌಶಿಕ್, ಮಳವಳ್ಳಿ**

ಪ್ರೀತಿಯಲ್ಲಿರುವ ಹುಡುಗ-ಹುಡುಗಿಯರಿಗೆ ಯಾವ ಭಾಷೆಯೂ ಅರ್ಥವಾಗುವುದಿಲ್ಲವಲ್ಲ?

-ಅವರಿಗೆ ಗೊತ್ತಿರೋದು ಹೃದಯದ ಭಾಷೆಯೊಂದೇ!

- **ಸೋಮು, ವೈಯಾಲಿಕಾವಲ್**

ಭಟ್ರೇ, ವಿಶ್ವ ನಿಮ್ಮ ಹೆಸರಾಯ್ತು, ಈ ವಾಣಿ ಯಾರು?

- ಅವಳು ಓದುಗರ ಕಣ್ಮಣಿ!!

ಕಾರ್ಪೊರೇಟ್ ಫಾರ್ಮಿಂಗ್, ಹಸಿರು ಕ್ರಾಂತಿಗಿದು ಸಕಾಲ!

ಹೊಸ ಚಿಂತನೆ

ವಿಕ್ರಮ್ ಜೋಶಿ

editoped@vishwavani.news

ಬಹುರಾಷ್ಟ್ರೀಯ ಕಂಪನಿಯ ದೊಡ್ಡ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದವರೊಬ್ಬರು ಒಂದು ಬೆಳಗ್ಗೆ ನಮ್ಮ ಮನೆಗೆ ಬಂದು ನಾನು ಹಾಲು ಮಾರಲು ಶುರು ಮಾಡಿದ್ದೇನೆ. ಇದು ರಾಸಾಯನಿಕ ಮಿಶ್ರಿತ ಹಾಲಲ್ಲ, ಪರಿಶುದ್ಧ ಹಾಲು. ಆಸಕ್ತಿ ಇದ್ದರೆ ಹೇಳಿ ನಾಳಿಂದ ನಾನೇ ಬಂದು ಕೊಟ್ಟು ಹೋಗುತ್ತೇನೆ ಎಂದರು. ನಾವೆಲ್ಲ ಕಂಗಾಲು! ಐಐಟಿಯಲ್ಲಿ ಎಂಜಿನಿಯರಿಂಗ್ ಮಾಡಿ ಐಐಎಮ್‌ನಲ್ಲಿ ಎಂಬಿಎ ಪದವಿ ಪಡೆದು ಕೋಟ್ಯಂತರ ರೂಪಾಯಿ ಹಣ ಮಾಡುತ್ತಿದ್ದವರು ಕೆಲಸ ಬಿಟ್ಟು ದಿಢೀರನೆ ಹೀಗೆ ಹಾಲು ಮಾರುವ ಉದ್ಯೋಗಕ್ಕೆ ಯಾಕೆ ಕೈ ಹಾಕಿದರು? ಅವರ ಈ ಬದಲಾವಣೆ ನನಗೆ ಕುತೂಹಲ ಹೆಚ್ಚಿಸಿದ್ದರಿಂದ ಅವರನ್ನು ನೇರವಾಗಿ ಸಂಪರ್ಕಿಸಿದೆ. ಇದೆಲ್ಲಾ ಏನು? ಕಂಪನಿಯ ಕೊಟ್ಟ ಐಷಾರಾಮಿ ಕಾರು ಮಾರಿದ್ದೀರಿ, ಹಾಲು ಮಾರುವುದಕ್ಕೆ ಅಂತ ಈ ಸಣ್ಣದೊಂದು ಕಾರನ್ನು ಇಟ್ಟುಕೊಂಡು ಹೀಗೆ ಜೀವನ ನಡೆಸುತ್ತೀರಲ್ಲ, ಯಾಕೆ ಇದೆಲ್ಲ? ಎಂದು ಕೇಳಿದೆ. ಅದಕ್ಕೆ ಅವರು ತಕ್ಷಣವೇ ಉತ್ತರಿಸಲಿಲ್ಲ. ತಮ್ಮ ಕಾರಿನಲ್ಲಿ ಕೂರಿಸಿಕೊಂಡು ಪೇಟೆಯಿಂದ ಐವತ್ತು ಕಿಮೀ ದೂರದಲ್ಲಿರುವ ಒಂದು ವಿಶಾಲ ಹೊಲಕ್ಕೆ ಕರೆದೊಯ್ದರು, ಹತ್ತು ಎಕರೆಯಷ್ಟಿದ್ದ ಅವರದ್ದೇ ಜಮೀನದು. ಅಲ್ಲಿಯೇ ಅವರು ವ್ಯವಸಾಯ ಮಾಡುತ್ತಿದ್ದಾರೆ.

'ಇಂದು ದುಡಿಮೆ ಕಡಿಮೆ ಇರಬಹುದು, ಆದರೆ ನೆಮ್ಮದಿ ಇದೆ. ನಿಮ್ಮ ಸ್ವಂತಕ್ಕೆ ದುಡಿಯುವುದರಲ್ಲಿ ಸಿಗುವ ಆ ನೆಮ್ಮದಿಗೆ ಬೆಲೆ ಕಟ್ಟಲು ಅಸಾಧ್ಯ. ಗಳಿಕೆ, ನೆಮ್ಮದಿ ಇವೆಲ್ಲ ಒಂದಾದರೆ ಜನರಿಗೆ ಬೇಕಾದ ಆಹಾರವನ್ನು ಯಾವುದೇ ರಾಸಾಯನಿಕ ಮಿಶ್ರಣವಿಲ್ಲದೇ ನ್ಯಾಚುರಲ್ ಆಗಿ ಒದಗಿಸುತ್ತೇವೆಂಬ ಸಮಾಧಾನದಲ್ಲಿ ಎಲ್ಲಕ್ಕಿಂತ ಹೆಚ್ಚಿನ ತೃಪ್ತಿಯಿದೆ' ಎಂದರು.

ಅವರ ಮಾತಿನಲ್ಲಿ ನನಗೆ ನಮ್ಮ ದೇಶ ಮುಂದಿನ ದಿನಗಳಲ್ಲಿ ಕಾಣಬಹುದಾದ ಕೃಷಿ ಕ್ಷೇತ್ರದ ಕ್ರಾಂತಿಯ ಚಿಗುರು ಕಂಡಂತಾಯಿತು. ಹಾಗೇ ಅವರ ಹೊಲದ ಪಕ್ಕದಲ್ಲೇ ಮೆಡಿಕಲ್ ಕಾಲೇಜ್ ಪ್ರೊಫೆಸರ್ ಒಬ್ಬರು ನಡೆಸುತ್ತಿರುವ ಡೇರಿ ನೋಡಿದ ಮೇಲಂತೂ ನಮ್ಮ ದೇಶ ಇನ್ನೊಂದು ಕೃಷಿ ಕ್ರಾಂತಿಗೆ ಸಜ್ಜಾಗುತ್ತಿದೆ ಎಂಬ ಮಾತು ಖಾತ್ರಿಯಾಯಿತು.

ಇಂದು ಜನರಿಗೆ ಪಟ್ಟಣದ ಜೀವನ ಬೇಸರ ಎನಿಸಿದೆ. ಅವಕಾಶ ಸಿಕ್ಕರೆ ಯಾವಾಗ ತನ್ನ ಊರಿಗೆ ಮರಳಿ ಹೋಗುವೆನೋ ಎನ್ನುವ ಹಾಗಾಗಿದೆ. ಇದಕ್ಕೆ ಕಾರಣ ಕ್ಯಾನ್ಸರ್ ರೀತಿ ಯದ್ವಾ-ತದ್ವಾ ಅಂಕೆಯಿಲ್ಲದೇ ಬೆಳೆದಿರುವ ನಮ್ಮ ನಗರಗಳು. ಅಲ್ಲಿಯ ಮಾಲಿನ್ಯ, ಕೃತಕ ಬದುಕು, ವಿಷಪೂರಿತ ಆಹಾರ, ವಿಚಿತ್ರವಾದ ಸ್ಪರ್ಧಾತ್ಮಕ ಮನೋಭಾವನೆ. ವಿನಾಕಾರಣ ಮಾನಸಿಕ ಒತ್ತಡದಲ್ಲಿ ಬೇಯುತ್ತಿರುವ ಉದ್ಯೋಗಿಗಳಿಗೆ ಹಾಗೂ ಸಣ್ಣ ಪುಟ್ಟ ಉದ್ಯಮಿಗಳಿಗೆ ಒಂದೊಂದು ದಿನವೂ ಹಿಂಸೆ ಎನಿಸುತ್ತಿದೆ. ಕಣ್ಣು ಕುಕ್ಕುವ ದೀಪಗಳು, ನಿಲ್ಲದ ಟ್ರಾಫಿಕ್ ಜಾಮ್, ತಿಂಗಳ ಮೊದಲ ವಾರಕ್ಕೇ ಕಿಸೆ ಬರಿದು ಮಾಡುವ ಮಾಲ್, ನಶೆ ತರಿಸುವ ಬಾರ್ ಎಲ್ಲವೂ ಒಂದು ಕಾಲದಲ್ಲಿ ಪ್ರಮುಖ ಆಕರ್ಷಣೆ ಆಗಿದ್ದವು. ಆದರೇ ಅವುಗಳೇ ಇಂದು ಜನರನ್ನು ಪಟ್ಟಣದಿಂದ ದೂರ ಮಾಡುತ್ತಿದೆ. ಎಂದು ಇಲ್ಲಿಂದ ಮುಕ್ತಿ ಸಿಗುವುದೋ ಎಂಬ ಚಡಪಡಿಕೆ ಶುರುವಾಗಿದೆ. ಇಂದು ಹೃದಯ ವೈದ್ಯರಿಗಿಂತ ಹೆಚ್ಚು ಮನಶಾಸ್ತ್ರಜ್ಞರು ಬೇಡಿಕೆಯಲ್ಲಿದ್ದಾರೆ. ಎಂಜಿನಿಯರ್ ಅಲ್ಲ, ವಕೀಲರೂ ಅಲ್ಲ, ಬದಲಾಗಿ ನಮ್ಮನ್ನು ಗುಣಪಡಿಸಬೇಕಾದ ವೈದ್ಯರೇ ಅತೀ ಹೆಚ್ಚು ತೊಂದರೆಯಲ್ಲಿದ್ದಾರೆ. ಒಂದು ಸಮೀಕ್ಷೆಯ ಪ್ರಕಾರ ಅತೀ ಹೆಚ್ಚು ಮಾನಸಿಕ ಒತ್ತಡದಲ್ಲಿ ಬಳಲುತ್ತಿರುವ ವೃತ್ತಿಪರರು ಅಂದರೆ ವೈದ್ಯರಂತೆ! ಡ್ರೈವರ್, ಕಂಡಕ್ಟರ್, ಬ್ಯಾಂಕರ್, ಲಾಯರ್, ಎಂಜಿನಿಯರ್, ಡಾಕ್ಟರ್, ಕಮಿಷನರ್, ಆಕ್ಟರ್, ಸಿಂಗರ್ ಇವರಲ್ಲಿ ಯಾರನ್ನೇ ಕೇಳಿ ಸಾಕಪ್ಪ ಈ ಜೀವನ ಎಲ್ಲಾದರೂ ನೆಮ್ಮದಿಯ ಜಾಗಕ್ಕೆ ಹೋಗಿ ಬದುಕೋಣ ಅನಿಸುತ್ತಿದೆ ಎನ್ನುತ್ತಾರೆ. ಹಾಗಾದರೆ ನಗರದ ಜೀವನಕ್ಕೆ ಏನಾಯಿತು?

ಇದು ಕೇವಲ ನಗರ ಅಥವಾ ಹಳ್ಳಿಯ ಜೀವನದ ವಿಷಯವಲ್ಲ. ನಾವು ಎಲ್ಲಿದ್ದೇವೆಯೋ ಆ ಜಾಗ ನಮಗೆ ಎಷ್ಟು ಪೂರಕವಾಗಿದೆ ಎನ್ನುವುದು ಮುಖ್ಯ. ಹಳ್ಳಿಯಲ್ಲಿ ಸೌವಲತ್ತುಗಳಿಲ್ಲ, ಪಟ್ಟಣದಲ್ಲಿ ಶಾಂತಿಯಿಲ್ಲ ಹಾಗಿದ್ದರೆ ಏನು ಮಾಡಬೇಕು? ನಗರವನ್ನು ನಿರ್ಮಲಗೊಳಿಸಿ, ಹತೋಟಿ ತಪ್ಪಿರುವ ಸಂಕೀರ್ಣ ಬೆಳವಣಿಗೆಯನ್ನು ಸರಳೀಕರಿಸಿ, ಹತೋಟಿಗೆ ತರಬೇಕು. ನಿಂತ ನೀರಾಗಿರುವ ಹಳ್ಳಿಗೆ ಹೊಸ ಬೆಳವಣಿಗೆ ಹರಿಸಿಬೇಕು. ಬೆಳಕಿನ ವೇಗದಲ್ಲಿ ಹಳ್ಳಿಗಳನ್ನು ಬೆಳೆಸುತ್ತಾ ಹೋಗಬೇಕು. ಹಳ್ಳಿಯಲ್ಲಿ ಇರುವವರು ಯಾರು? ಏತಕ್ಕಾಗಿ ಹಳ್ಳಿಗಳ ಬೆಳವಣಿಗೆ ಆಗಬೇಕು? ಪಟ್ಟಣಗಳಲ್ಲಿಂದು ಎಲ್ಲಿ ನೋಡಿದರಲ್ಲಿ ಜನರೇ ಕಾಣುತ್ತಾರೆ. ಭಾರತವೇ ನಗರ ಜೀವನಕ್ಕೆ ಮಾರುಹೋಯಿತಾ ಎಂದನಿಸಿದರೆ ಅದು ಖಂಡಿತ ತಪ್ಪಲ್ಲ.ಆದರೆ, ಸತ್ಯವಾಗಿ ಶೇ. 65 ಜನರು ಈಗಲೂ ಹಳ್ಳಿಯಲ್ಲೇ ವಾಸವಾಗಿದ್ದಾರೆ. ಆದರೆ ಅಲ್ಲಿ ಬೆಳವಣಿಗೆಗಳೇ ಇಲ್ಲ, 1960ರಲ್ಲಿ ಭಾರತದ ಜಿಡಿಪಿಯಲ್ಲಿ ಕೃಷಿಯ ಪಾಲು ಶೇ.50 ಇತ್ತು, ಅದಿಂದು ಕೇವಲ ಶೇ. 12-13ಕ್ಕೆ ಬಂದು ನಿಂತಿದೆ. ಗ್ರಾಮೀಣ ಪ್ರದೇಶದ ಮುಕ್ಕಾಲು ಜನರ ಮಾಸಿಕ ಆದಾಯ 5000ರುಗಿಂತಲೂ ಕಡಿಮೆ! ಶೇ. 50 ಜನರಿಗೆ ಕೃಷಿ ಮಾಡಲು ನೆಲವಿಲ್ಲ, ಹಲವರಿಗೆ ಮಾಡಲು ಕೆಲಸವಿಲ್ಲ, ಹೆಚ್ಚಾಗಿ ಎಲ್ಲರೂ ಸಾಂದರ್ಭಿಕ ಕಾರ್ಮಿಕರು.

ಶಿಕ್ಷಣದಲ್ಲಿಯೂ ಹಳ್ಳಿಗಳು ನಗರಗಳಿಗಿಂತ ಬಹಳ ಹಿಂದಿವೆ. ವಿಶೇಷವಾಗಿ ಗ್ರಾಮೀಣ ಮಹಿಳೆಯರ ಸಾಕ್ಷರತೆ. ಹಳ್ಳಿಗೆ ಹೋಲಿಸಿದರೆ 20%ರಷ್ಟು ಹೆಚ್ಚು ನಗರದ ಮಹಿಳೆಯರು ಶಿಕ್ಷಣ ಪಡೆಯುತ್ತಿದ್ದಾರೆ. ಹೀಗೆ ಪಟ್ಟಿ ಮಾಡಿದರೆ ಪ್ರತಿ ಕ್ಷೇತ್ರದಲ್ಲೂ ಗ್ರಾಮೀಣ ಹಾಗೂ ಪಟ್ಟಣಗಳ ಬೆಳವಣಿಗೆಯ ನಡುವೆ ಗ್ರಹಿಕೆಗೆ ಬರುವಂತಹ ಭಾರೀ ಅಂತರವಿದೆ. ಆರೋಗ್ಯ, ಸಾರಿಗೆ, ರಸ್ತೆ, ನೀರು, ಶಿಕ್ಷಣ, ಭದ್ರತೆ ಇವೆಲ್ಲವೂ ಪಟ್ಟಣ ಪ್ರದೇಶದಲ್ಲಿ ಕಂಡ ಬೆಳವಣಿಗೆಯ ಪ್ರಮಾಣ ಗ್ರಾಮೀಣ ಪ್ರದೇಶದಲ್ಲಿ ಆಗಿಲ್ಲ. ಶಹರಗಳು ಬೃಹದಾಕಾರವಾಗಿ ಬೆಳೆದಿದ್ದರೂ ಅವುಗಳಲ್ಲಿ ವಾಸಿಸಲು ಬೇಕಾದ ಯೋಗ್ಯತೆ ಉಳಿಸಿಕೊಳ್ಳಲು ವಿಫಲವಾಗುತ್ತಿವೆ. ಜಗತ್ತಿನ ಹತ್ತು ಅತ್ಯಂತ ಕಲುಷಿತ ಪಟ್ಟಣಗಳನ್ನು ಪಟ್ಟಿ ಮಾಡಿದರೆ ಒಂಬತ್ತು ಭಾರತದಲ್ಲೇ ಇದೆ! ಇದರಿಂದಾಗಿ ಇಂದು ಜನರು ಹಳ್ಳಿಗೆ ಬರುವ ಹಾಗಿಲ್ಲ, ಹಾಗೊಮ್ಮೆ ಬಂದರೂ ಪಟ್ಟಣದಲ್ಲಿ ವಾಸಿಸುವ ಹಾಗಿಲ್ಲ. ಹಾಗಿದ್ದರೆ ಇದಕ್ಕೇನು ಪರಿಹಾರ?

ಕೃಷಿ ಹಾಗೂ ಕೃಷಿ ಉತ್ಪನ್ನಗಳಲ್ಲಿ ಆಗಬೇಕಾದ ಕ್ರಾಂತಿಯೇ ಇವತ್ತಿನ ಬಹುಪಾಲು ಸಮಸ್ಯೆಗಳಿಗೆ ಪರಿಹಾರ. ಮೇಲೆ ಹೇಳಿದ ನಿದರ್ಶನ ಒಂದೇ ಅಲ್ಲ ಈಗಾಗಲೇ ಕೃಷಿಯಲ್ಲಿ ಕ್ರಾಂತಿ ಆರಂಭವಾಗಿದೆ. ಇದಕ್ಕೆ ಪೂರಕವಾಗಿ ಹೊಸದೊಂದು ಆ್ಯಪ್ ಕೂಡ ಬಂದಿದೆ. ಅದರಲ್ಲಿ ನೀವು ರಿಜಿಸ್ಟರ್ ಆಗಬೇಕು. ಅಲ್ಲಿ ನಿಮಗೆ ನಾಳೆ ಯಾವ ತರಕಾರಿಯನ್ನು ಎಲ್ಲಿ ಕೀಳಲಾಗುತ್ತದೆ ಎಂಬ ಮಾಹಿತಿ ಒದಗಿಸಲಾಗುತ್ತದೆ. ಅದನ್ನು ನೋಡಿ ನೀವು ಇಂದು ಆರ್ಡರ್ ಮಾಡಿದರೆ ನಾಳೆ ಸಂಜೆಯ ಹೊತ್ತಿಗೆ ತಾಜಾ ತರಕಾರಿ ನಿಮ್ಮ ಮನೆ ಬಾಗಿಲಿಗೆ ಬಂದಿರುತ್ತದೆ. ಇತ್ತೀಚೆಗೆ ಹಾಲಿನ ಬಗ್ಗೆ ನಮ್ಮೆಲ್ಲರ ಶಂಕೆ ಹೆಚ್ಚಾಗಿದೆ. ಅದಕ್ಕೆ ಇದು ಹಾಕುತ್ತಾರೆ, ಅದು ಹಾಕುತ್ತಾರೆ ಎನ್ನುವ ವಿಡಿಯೋ ನೋಡಿ, ಆಡಿಯೋ ಕೇಳಿ ನಿಶ್ಚಿಂತೆಯಿಂದ ಹಾಲು ಕುಡಿಯಲು ಮನಸ್ಸು ಬಿಡುವುದೇ ಇಲ್ಲ.

ಇದಕ್ಕಾಗಿ ಈಗ ಹೊಸತೊಂದು ಆ್ಯಪ್ ಇದೆ. ಈ ಆ್ಯಪ್ ವಿಶೇಷ ಏನು ಗೊತ್ತೇ? ಅದರಲ್ಲಿ ನೀವು ಮನೆಗೆ ಹಾಲನ್ನು ನೇರವಾಗಿ ತರಿಸಿಕೊಳ್ಳಬಹುದು. ಹಾಲು ನಿಮ್ಮ ಮನೆಗೆ ಎಲ್ಲಿಂದ ಸರಬರಾಜು ಆಗುತ್ತದೆ ಎಂಬ ಮಾಹಿತಿ ಬರುತ್ತದೆ. ನೀವು ಖುದ್ದಾಗಿ ಹೋಗಿ ಅಲ್ಲಿಯ ಪರಿಸರದ ಬಗ್ಗೆ ಮಾಹಿತಿ ಪಡೆಯಬಹುದು, ಇದು ಪಾರದರ್ಶಕ ವ್ಯಾಪಾರ. ಹತ್ತು ರುಪಾಯಿ ಹೆಚ್ಚಾದರೂ ಪರವಾಗಿಲ್ಲ, ಶುದ್ಧ ಹಾಲು ಸಿಗುತ್ತದೆ ಎಂಬ ನೆಮ್ಮದಿ ನಿಮ್ಮ ಪಾಲಿಗೆ. ಇವೆಲ್ಲ ತಂತ್ರಜ್ಞಾನ ಬಳಸಿ ವ್ಯವಹಾರ ಕುದುರಿಸಲು ಮಾಡಿರುವ ಹೊಸ ಆವಿಷ್ಕಾರಗಳೇ. ಇಂತಹುದೇ ಆವಿಷ್ಕಾರಗಳು ಕೃಷಿ ಉತ್ಪನ್ನಗಳ ಇಳುವರಿ ಹೆಚ್ಚಿಸುವಲ್ಲಿ ಕೂಡ ನಡೆಯುತ್ತಿವೆ, ಹೈನುಗಾರಿಕೆಯಲ್ಲಿ ಐಒಟಿ (ಇಂಟರ್ನೆಟ್ ಆಫ್ ಥಿಂಗ್ಸ್) ಲಗ್ಗೆ ಹಾಕುತ್ತಿದೆ. ಭಾರತದ ಕೃಷಿ ಕ್ರಾಂತಿಯಲ್ಲಿ ಭಾಗವಹಿಸಿ, ದೇಶದ ಪ್ರಗತಿಯ ಪಯಣದಲ್ಲಿ ಪಾಲ್ಗೊಳ್ಳಲು ನಮಗೆಲ್ಲ ಇದೇ ಸದಾವಕಾಶ. ಕೆಲವು ವರ್ಷಗಳ ಹಿಂದೆ ಐಟಿ ಇತ್ತು, ಆದರಿಂದು ಅದು ಕೃಷಿ ಎಂದು ಬದಲಾಗಿದೆ! ಹಾಗೆಯೇ ಇದು ಕೇವಲ ಜನರಿಂದ ಮಾತ್ರ ಸಾಧ್ಯವಲ್ಲ, ಸರಕಾರದ ಸಹಕಾರ ಮತ್ತು ಪ್ರೋತ್ಸಾಹವೇ ಪ್ರೇರಕ ಶಕ್ತಿ.

'ಭಾರತ ಸರಕಾರ ತಕ್ಷಣವೇ ಯಾವುದೊಂದು ರಂಗಕ್ಕೆ ಹೆಚ್ಚು ಒತ್ತು ಕೊಡಬೇಕು' ಎಂಬ ವಿಷಯವಾಗಿ ಶೇರ್ ಮಾರುಕಟ್ಟೆಯ ಅಧಿಪತಿ ಎನಿಸಿರುವ ರಾಕೇಶ ಜುಂಜುನವಾಲಾ ಅವರ ಇತ್ತೀಚಿನ ಒಂದು ಸಂದರ್ಶನದಲ್ಲಿ ಪ್ರಶ್ನೆ ಕೇಳಿಬಂತು. ಅದಕ್ಕೆ ಉತ್ತರಿಸಿದ ಅವರು, 'ಕಾರ್ಪೊರೇಟ್ ಫಾರ್ಮಿಂಗ್' ಎಂಬ ಪದ ಪ್ರಯೋಗ ಮಾಡಿದ್ದರು. ಅವರ ಪ್ರಕಾರ ಇಂದು ಭಾರತದ ಕೃಷಿ ಇಳುವರಿ ಪಾಕಿಸ್ತಾನ ಹಾಗೂ ಬಾಂಗ್ಲಾ ದೇಶಕ್ಕಿಂತಲೂ ಕಡಿಮೆ ಇದೆ. ಅದನ್ನು ಹೆಚ್ಚಿಸಲು ಕೃಷಿಯಲ್ಲಿ ಆಧುನಿಕತೆ ತರುವ ಅವಶ್ಯದ ಬಗ್ಗೆ ಪ್ರಧಾನವಾಗಿ ಪ್ರಸ್ತಾಪಿಸಿದ್ದರು.

ನನ್ನ ಪ್ರಕಾರ ಕೃಷಿಯಲ್ಲಿ ಒಂದು ದೊಡ್ಡ ಉದ್ಯೋಗದ ಗಣಿಯೇ ಅಡಗಿದೆ. ಭಾರತವು ಕೇವಲ ಉತ್ಪಾದನಾ ಕ್ಷೇತ್ರಗಳಲ್ಲಿ ಉದ್ಯೋಗ ಸೃಷ್ಟಿಸಿದರೆ ಸಾಲದು ಎನಿಸುತ್ತದೆ. ಬದಲಾಗಿ ಕೃಷಿಯಲ್ಲಿಯೂ ಕೂಡ ಉದ್ಯೋಗಗಳು ಸೃಷ್ಟಿಯಾಗಬೇಕು. ಹಳ್ಳಿಗಳಲ್ಲಿ ಉದ್ಯೋಗ ಸೃಷ್ಟಿಗೆ ಕಾರ್ಪೊರೇಟ್ ಫಾರ್ಮಿಂಗ್ ಅತ್ಯುತ್ತಮ ಫಾರ್ಮುಲಾ ಎನ್ನಲಡ್ಡಿಯಿಲ್ಲ.

ಐಐಎಮ್ ಅಹಮದಾಬಾದ್ ಪ್ರಕಟಿಸಿದ ಒಂದು ಪಬ್ಲಿಕೇಷನ್ ಪ್ರಕಾರ ಈವರೆಗೆ ಕೇವಲ ಹತ್ತು ಕಂಪನಿಗಳು ಮಾತ್ರ ಹಳ್ಳಿಗೆ ಹೋಗಿ ಅಲ್ಲಿ ಹೊಲವನ್ನು ಬಾಡಿಗೆಗೆ ತಗೆದುಕೊಂಡು ಕೃಷಿ ಮಾಡುವುದರಲ್ಲಿ ಆಸಕ್ತಿ ತೋರಿಸಿವೆ. ಕಂಪನಿಗಳು ಏಕೆ ಹೆಚ್ಚು ಆಸಕ್ತಿ ತೋರಿಸುತ್ತಿಲ್ಲ ಎನ್ನುವ ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರ ಕೊಡುವುದು ಇಲ್ಲಿ ಕಷ್ಟ. ಅದೇನೇ ಇರಲಿ, ಕಾರ್ಪೊರೇಟ್ ಫಾರ್ಮಿಂಗ್ ಜತೆಗೇ ಜನರು ಇಂದು ಮಾಡುತ್ತಿರುವ ಕೃಷಿಯಲ್ಲಿ ವ್ಯಾಪಾರೀಕರಣ ತರುವ ಅವಶ್ಯವಿದೆ. ಚೀನಾ, ಅಮೇರಿಕಾ ಇವನ್ನೆಲ್ಲ ನೋಡಿದರೆ ನಮ್ಮಲ್ಲಿ ಕೃಷಿ ರಂಗದ ಬೆಳವಣಿಗೆ ಆಗಿಯೇ ಇಲ್ಲ, ವ್ಯಾಪಾರೀಕರಣವಂತೂ ಶೂನ್ಯವೆ. ಅದೇ ಅಮೇರಿಕದಲ್ಲಿ ಹೊಸ ಮೊಬೈಲ್ ಬಿಡುಗಡೆ ಆಗಲಿ, ಮಾರನೇ ವಾರವೇ ಭಾರತದ ಹಳ್ಳಿ ತಲುಪಿರುತ್ತದೆ. ಆದರೆ ಕೃಷಿ ವಿಷಯದಲ್ಲಿ ಮಾತ್ರವೇ ನಮ್ಮ ಹಳ್ಳಿಗಳು ಬಹಳ ಬಡವಾಗಿವೆ. ಇದನ್ನು ಗ್ರಹಿಸಿಯೇ ಈ ವರ್ಷದ ಆಯವ್ಯಯದಲ್ಲಿ ಗ್ರಾಮೀಣ ಪ್ರದೇಶದ ಬೆಳವಣಿಗೆಗೆ ಅತೀ ಹೆಚ್ಚು ಒತ್ತು ಕೊಡಲಾಗಿದೆ. ಭಾರತವು ಇನ್ನೊಂದು ಕೃಷಿ ಕ್ರಾಂತಿಗೆ ಎದುರು ನೋಡುತ್ತಿದೆ. ಮುಂದಿನ ಬಾರಿಯೂ ನರೇಂದ್ರ ಮೋದಿಯವರು ಗೆದ್ದು ಬಂದರೆ ಭಾರತದ ಕೃಷಿ ರಂಗದಲ್ಲಿ ಕ್ರಾಂತಿ ಖಚಿತ ಎನ್ನಬಹುದು. ಇಂದು ಜನರು ಶಹರ ಬಿಟ್ಟು ಹಳ್ಳಿಗೆ ಬರಲು ತಯಾರಾಗಿದ್ದಾರೆ, ಕೃಷಿಯನ್ನು ಜೀವನಕ್ಕೆ ಆಧಾರವಾಗಿ ಮಾಡಿಕೊಂಡು ಬದುಕಲು ಒಪ್ಪುತ್ತಿದ್ದಾರೆ. ಅದೆಲ್ಲದಕ್ಕೂ ಸರಕಾರದ ನೀತಿಗಳು ಪೂರಕವಾಗಬೇಕು.

ಪ್ರಾಚೀನ ಶಿಕ್ಷಣ ಪದ್ಧತಿ ಇಂದಿಗೂ ಪ್ರಸ್ತುತವೇ?

ಶಿಕ್ಷಣ

ವಿಶ್ವನಾಥ ಎನ್. ನೇರಳಕಟ್ಟೆ

ಕನ್ನಡ ಉಪನ್ಯಾಸಕ

ಆಧುನಿಕ ಶಿಕ್ಷಣ ವ್ಯವಸ್ಥೆಯನ್ನು ಗಮನಿಸಿದಾಗ ಪ್ರಾಚೀನ ಶಿಕ್ಷಣ ಪದ್ಧತಿ ಇಂದಿಗೂ ಪ್ರಸ್ತುತವೇ? ಎಂಬ ಪ್ರಶ್ನೆ ಮೂಡುತ್ತದೆ. ಇಂದಿನ ಶಿಕ್ಷಣ ವ್ಯವಸ್ಥೆಯ ಕುರಿತಾದ ಬಹುಜನಪ್ರಿಯ ಹಾಸ್ಯ ಪ್ರಸಂಗವೊಂದು ಹೀಗಿದೆ, ಯಾರೋ ತಂದೆ- ತಾಯಿ ಪಿಯುಸಿ ಪೂರೈಸಿದ್ದ ತಮ್ಮ ಮಗನನ್ನು ಪದವಿ ಕಾಲೇಜಿಗೆ ಸೇರಿಸಬಯಸಿದ್ದರು. ಕಾಲೇಜಿಗೆ ಪ್ರವೇಶಿಸುವ ಮೊದಲು ಅಲ್ಲೇ ಇದ್ದ ಗೇಟ್‌ಕೀಪರ್‌ನಲ್ಲಿ ಕಾಲೇಜಿನ ಗುಣಮಟ್ಟ ಹೇಗಿದೆ? ಎಂದು ಪ್ರಶ್ನಿಸಿದರು. ಕಾಲೇಜು ತುಂಬಾ ಒಳ್ಳೆಯದಿದೆ, ಒಳ್ಳೆಯ ಗುಣಮಟ್ಟದ ಶಿಕ್ಷಕರಿದ್ದಾರೆ ಎಂಬ ಅಭಿಪ್ರಾಯ ಆತನಿಂದ ಬಂತು. ನಿನಗೆ ಅಷ್ಟು ಸರಿಯಾಗಿ ಹೇಗೆ ಗೊತ್ತು? ಎಂದದ್ದಕ್ಕೆ ನಾನೂ ಇದೇ ಕಾಲೇಜಿನ ಹಳೆ ವಿದ್ಯಾರ್ಥಿ ಎಂದನಂತೆ. ಮೇಲ್ನೋಟಕ್ಕೆ ಇದು ತಮಾಷೆಯ ಪ್ರಸಂಗವಾಗಿ ಕಂಡರೂ ಇಂದಿನ ಶಿಕ್ಷಣ ವ್ಯವಸ್ಥೆಯ ವಿಫಲತೆಯನ್ನು ನಮ್ಮ ಮುಂದಿಡುತ್ತದೆ. ಗೇಟ್‌ಕೀಪರ್ ಆಗಿ ದುಡಿಯುವುದರಲ್ಲೇನೂ ತಪ್ಪಿಲ್ಲ. ಬೇರೆಲ್ಲಾ ಕೆಲಸಗಳಂತೆ ಅದೂ ಒಂದು ಕೆಲಸವೇ. ಆದರೆ ಪದವಿ ಪಡೆದೂ ಗೇಟ್‌ಕೀಪರ್ ಆಗಿ ದುಡಿಯಬೇಕಾದದ್ದು ಬಹುದೊಡ್ಡ ದುರಂತ. ಇದಕ್ಕೆ ಕಾರಣ ಸ್ಪಷ್ಟ- ಆಧುನಿಕ ಶಿಕ್ಷಣ ಆಳಿಸಿಕೊಳ್ಳುವವರನ್ನು ರೂಪಿಸುತ್ತಿದೆಯೇ ಹೊರತು ಆಳುವವರನ್ನಲ್ಲ.

ಅಷ್ಟಕ್ಕೂ ಶಿಕ್ಷಣ ಎಂದರೇನು? ಅದರ ಸ್ವರೂಪ ಹೇಗಿರಬೇಕು? ಎಂಬ ನಮ್ಮ ಇಂದಿನ ಚಿಂತನೆಗೆ ಸ್ವಾಮಿ ವಿವೇಕಾನಂದರು ಶತಮಾನದ ಹಿಂದೆ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಮಾರ್ಗದರ್ಶಿಯಾಗಬಲ್ಲವು. ವಿವೇಕಾನಂದರು ಶಿಕ್ಷಣವನ್ನು ಈ ರೀತಿಯಾಗಿ ವ್ಯಾಖ್ಯಾನಿಸಿದ್ದಾರೆ- 'ಶಿಕ್ಷಣ ಮನುಷ್ಯನಲ್ಲಿ ಈಗಾಗಲೇ ಇರುವ ಪರಿಪೂರ್ಣತೆಯನ್ನು ಪ್ರಕಾಶಪಡಿಸುವ ಸಾಧನವಾಗಿದೆ'. ಅವರ ಈ ವ್ಯಾಖ್ಯಾನದಲ್ಲಿ ಶಿಕ್ಷಣದ ಸ್ವರೂಪ ಖಚಿತತೆಯನ್ನು ಪಡೆದುಕೊಳ್ಳುತ್ತದೆ. ಒಬ್ಬ ವ್ಯಕ್ತಿಯಲ್ಲಿರುವ ವಿಶೇಷ ಸಾಮರ್ಥ್ಯ- ಕೌಶಲಗಳನ್ನು ಹೊರತರುವಂತಾದರೆ ಶಿಕ್ಷಣ ಸಾರ್ಥಕತೆಯನ್ನು ಪಡೆದುಕೊಳ್ಳುತ್ತದೆ. ವಿದ್ಯಾರ್ಥಿಗಳಲ್ಲಿ ಮಾನಸಿಕ ದೃಢತೆ, ಆಲೋಚನಾ ಶಕ್ತಿ, ಜೀವನಾನುಭವಗಳನ್ನು ರೂಪಿಸದ ಶಿಕ್ಷಣ ಅಪ್ರಯೋಜಕ ಎನ್ನುವುದು ವಿವೇಕಾನಂದರ ಸ್ಪಷ್ಟ ಅಭಿಪ್ರಾಯವಾಗಿತ್ತು.

ಹಾಗಿದ್ದರೆ ಪ್ರಾಚೀನ ಶಿಕ್ಷಣ ಪದ್ಧತಿ ಆಧುನಿಕ ಶಿಕ್ಷಣ ವ್ಯವಸ್ಥೆಗಿಂತ ಉನ್ನತ ಮಟ್ಟದಲ್ಲಿತ್ತೇ? ಎಂಬ ಪ್ರಶ್ನೆಯನ್ನು ಹಾಕಿಕೊಂಡರೆ ನಿಸ್ಸಂಶಯವಾಗಿಯೂ ಹೌದು ಎನ್ನುವುದೇ ಉತ್ತರವಾಗಿರುತ್ತದೆ. ಒಂದು ಉದಾಹರಣೆಯ ಮೂಲಕ ಇದನ್ನು ಸ್ಪಷ್ಟಪಡಿಸಿಕೊಳ್ಳಬಹುದು. ನಮ್ಮ ದೇಶದ ಪ್ರಾಚೀನ ವಿಶ್ವವಿದ್ಯಾಲಯಗಳಲ್ಲಿ ಒಂದಾದ ನಳಂದಾ ವಿಶ್ವವಿದ್ಯಾಲಯಕ್ಕೆ ಪ್ರವೇಶ ಬಯಸಿ ಬಂದ ವಿದ್ಯಾರ್ಥಿಗಳು ಅಲ್ಲಿಯ ದ್ವಾರಪಾಲಕರಿಂದ ಆರಂಭಿಕ ಪರೀಕ್ಷೆಯನ್ನು ಎದುರಿಸಬೇಕಾಗಿತ್ತು. ಅಷ್ಟರ ಮಟ್ಟಿನ ಪಾಂಡಿತ್ಯವನ್ನು ದ್ವಾರಪಾಲಕರು ಗಳಿಸಿಕೊಂಡಿದ್ದರು ಎನ್ನುವುದೇ ಅಚ್ಚರಿಯ ಸಂಗತಿ. ಉನ್ನತ ಶಿಕ್ಷಣ ಪಡೆದವರಿಗೂ ಪಾಂಡಿತ್ಯವನ್ನು ದೊರಕಿಸಿಕೊಡದ ಇಂದಿನ ಶಿಕ್ಷಣ, ದ್ವಾರಪಾಲಕರಲ್ಲೂ ವಿದ್ವತ್ತನ್ನು ಉಂಟುಮಾಡಿದ್ದ ಪ್ರಾಚೀನ ಶಿಕ್ಷಣ- ಎರಡರ ನಡುವೆ ಅಜಗಜಾಂತರ ವ್ಯತ್ಯಾಸ ಇರುವುದಂತೂ ಸ್ಪಷ್ಟ.

ಪ್ರಾಚೀನ ಶಿಕ್ಷಣ ವ್ಯವಸ್ಥೆಯು ಗುರುಕುಲ ಪದ್ಧತಿಯನ್ನು ಒಳಗೊಂಡಿತ್ತು. ವಿದ್ಯಾರ್ಜನೆ ಬಯಸುವವರು ಗುರುಗಳ ಆಶ್ರಮದಲ್ಲಿಯೇ ಉಳಿದುಕೊಂಡು, ಅವರ ಕುಟುಂಬದ ಜತೆಗೆ ಬೆರೆತುಕೊಂಡು ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದರು. ಈ ಮೂಲಕ ಕೌಟುಂಬಿಕ ಮತ್ತು ಸಾಮಾಜಿಕ ಸಾಮರಸ್ಯಗಳ ಮಹತ್ವವನ್ನು ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತಿತ್ತು. ಬಾಲ್ಯದಿಂದಲೇ ಸಮಾಜದ ಇತರರೊಂದಿಗೆ ಬೆರೆತ ವಿದ್ಯಾರ್ಥಿಗಳು ಬಹುಸುಲಭವಾಗಿಯೇ ಸಾಮಾಜಿಕ ಸಂವಹನ ಸಾಮರ್ಥ್ಯವನ್ನು ಗಳಿಸಿಕೊಳ್ಳುತ್ತಿದ್ದರು. ಅಲ್ಲದೆ ಸಮಾಜಮುಖಿಗಳಾಗಿ ರೂಪುಗೊಳ್ಳಲು ಉತ್ತಮ ಅವಕಾಶ ಒದಗಿದಂತಾಗುತ್ತಿತ್ತು.

ಇನ್ನೊಂದು ಉಲ್ಲೇಖಾರ್ಹ ಅಂಶವೆಂದರೆ, ಪ್ರಾಚೀನ ಶಿಕ್ಷಣವು ಸೀಮಿತ ಅವಧಿಯದ್ದಾಗಿರಲಿಲ್ಲ. ಇಷ್ಟೇ ವರ್ಷಗಳಲ್ಲಿ ವಿದ್ಯಾರ್ಥಿಗಳ ಶಿಕ್ಷಣ ಪೂರ್ಣಗೊಳ್ಳುತ್ತದೆ ಎನ್ನುವ ಖಚಿತತೆಯೇನೂ ಇರಲಿಲ್ಲ. ಅದು ಗುರುಗಳ ವಿವೇಚನೆಯನ್ನು ಆಧರಿಸಿಕೊಂಡು ನಿರ್ಧಾರವಾಗುತ್ತಿತ್ತು. ಪ್ರಾಚೀನ ಶಿಕ್ಷಣವು ವಿದ್ಯಾರ್ಥಿಗಳಲ್ಲಿರುವ ಬಹುಮುಖಿ ಸಾಮರ್ಥ್ಯ ಅನಾವರಣದ ವೇದಿಕೆಯಾಗಿತ್ತು. ವ್ಯಕ್ತಿತ್ವದ ವಿಕಸನಕ್ಕೆ ಕಾರಣವಾಗುವ ಸಾಧನವಾಗಿತ್ತು. ಆದರೆ ಇಂದಿನ ಶಿಕ್ಷಣ ಪದ್ಧತಿ ಖಂಡಿತವಾಗಿಯೂ ಈ ಮಾದರಿಯಲ್ಲಿ ಉಳಿದುಕೊಂಡಿಲ್ಲ. ಉದ್ಯೋಗಾಕಾಂಕ್ಷಿಗಳನ್ನು ತಯಾರಿಸಿಕೊಡುವ ಕಾರ್ಖಾನೆಯಂತೆ ಕಾರ್ಯಾಚರಿಸುತ್ತಿದೆ. ಆಧುನಿಕ ಶಿಕ್ಷಣ ವ್ಯವಸ್ಥೆಯು ಹಲವು ದೋಷಗಳನ್ನು ಒಳಗೊಂಡಿದ್ದು, ಮೂರು ಅಂಶಗಳ ಮೂಲಕ ಆ ಎಲ್ಲಾ ದೋಷಗಳನ್ನು ಗುರುತಿಸಿಕೊಳ್ಳಬಹುದಾಗಿದೆ.

ಏಕಮುಖ ಸಂವಹನ. ಹಲವು ಸಂದರ್ಭಗಳಲ್ಲಿ ಬೋಧಕರು ಹೇಳುವುದನ್ನು ಕೇಳಿಸಿಕೊಳ್ಳುವುದಕ್ಕಷ್ಟೇ ವಿದ್ಯಾರ್ಥಿಗಳು ಸೀಮಿತರಾಗಿರುತ್ತಾರೆ. ಬೋಧಕರ ಅಭಿಪ್ರಾಯಗಳಿಗೆ ಪ್ರತಿಕ್ರಿಯಿಸುವ ಅವಕಾಶವೇ ಇರುವುದಿಲ್ಲ. ಕೇವಲ ಕೇಳಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳು ತಮ್ಮ ಆಲೋಚನಾ ಶಕ್ತಿಯನ್ನು ವಿಸ್ತರಿಸಿಕೊಳ್ಳಲಾರರು. ಬದಲಿಗೆ ಅಧ್ಯಯನ ವಿಷಯದ ಕುರಿತಾದ ಆಸಕ್ತಿಯನ್ನು ಮತ್ತಷ್ಟು ಕಳೆದುಕೊಳ್ಳುತ್ತಾರೆ. ಅಂತಿಮ ಪರಿಣಾಮವಾದರೂ ಏನು?- ಬೋಧಕರೆಂದರೆ ಹೇಳುವವರು, ವಿದ್ಯಾರ್ಥಿಗಳೆಂದರೆ ಹೇಳಿದ್ದನ್ನೆಲ್ಲಾ ಬಾಯಿಮುಚ್ಚಿ ಕೇಳಿಸಿಕೊಳ್ಳುವವರು ಎಂಬ ಮನಸ್ಥಿತಿ ರೂಪುಗೊಳ್ಳುವಂತಾಗಿದೆ.

ಪ್ರಾಯೋಗಿಕ ಜ್ಞಾನದ ಕೊರತೆಯು ಇನ್ನೊಂದು ಪ್ರಮುಖ ಕೊರತೆ. ಇಂದಿನ ಶಿಕ್ಷಣವು ಕೇವಲ ಪುಸ್ತಕ ಆಧಾರಿತವಾದುದಾಗಿದೆ. ವಾಸ್ತವವಾಗಿ ಪುಸ್ತಕ ಆಧಾರಿತ ಓದಿಗಿಂತಲೂ ಪ್ರಾಯೋಗಿಕ ತಿಳಿವಳಿಕೆಯೇ ಅತ್ಯಂತ ಪರಿಣಾಮಕಾರಿ ವಿಧಾನವಾಗಿದೆ. ಬ್ಯಾಂಕಿಂಗ್ ವ್ಯವಹಾರಗಳನ್ನು ಸ್ವತಃ ನಿರ್ವಹಿಸಿ ತಿಳಿದುಕೊಂಡವರು ಚೆಕ್ ಎಂದರೇನು? ಎಟಿಎಂ ಹೇಗೆ ಕಾರ್ಯಾಚರಿಸುತ್ತದೆ? ಹಣವನ್ನು ಒಂದು ಖಾತೆಯಿಂದ ಇನ್ನೊಂದು ಖಾತೆಗೆ ರವಾನಿಸುವುದು ಹೇಗೆ? ಎನ್ನುವುದನ್ನು ಮತ್ತೆ ಹೊಸದಾಗಿ ಪುಸ್ತಕ ಓದಿ ತಿಳಿದುಕೊಳ್ಳಬೇಕಾದ ಅಗತ್ಯವೇ ಇರುವುದಿಲ್ಲ. ತಮ್ಮ ಅನುಭವದ ನೆಲೆಗಟ್ಟಿನಲ್ಲಿಯೇ ಅರ್ಥೈಸಿಕೊಳ್ಳಲು ಶಕ್ತರಾಗಿರುತ್ತಾರೆ. ಆದರೆ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಇದು ಸಾಧಿತವಾಗುತ್ತಿಲ್ಲ. ಸರಳವಾದ ಉದಾಹರಣೆಯನ್ನು ನೀಡುವುದಾದರೆ, ಚಾಲಕನಾಗಬಯಸುವ ವ್ಯಕ್ತಿಯೊಬ್ಬ ವಾಹನ ಚಾಲನೆಯ ವಿಧಾನವನ್ನು ಕೇವಲ ಪುಸ್ತಕದಲ್ಲಿ ಓದಿಕೊಂಡು ಹೋಗಿದ್ದಾನೆ ಎಂದಿಟ್ಟುಕೊಳ್ಳೋಣ. ಆತನಿಗೆ ಪ್ರಾಯೋಗಿಕ ಜ್ಞಾನ ಇಲ್ಲ, ಪರಿಣಾಮ ಏನು? ಆತ ಚಲಾಯಿಸುವ ವಾಹನ ಬಹುದೂರ ಚಲಿಸಲಾರದು. ಸ್ವಲ್ಪ ಸಮಯದಲ್ಲಿಯೇ ಅಪಘಾತಕ್ಕೀಡಾಗುತ್ತದೆ, ಅಷ್ಟೆ. ಆಧುನಿಕ ಶಿಕ್ಷಣವನ್ನು ಪಡೆದುಕೊಂಡ ಬಹುತೇಕ ವಿದ್ಯಾರ್ಥಿಗಳ ಸ್ಥಿತಿಯೂ ಇದೇ ಆಗಿದೆ.

ಇನ್ನು ಶಿಕ್ಷಣ ಹಂತದಲ್ಲಿ ಅಭ್ಯಸಿಸುವ ವಿಷಯಗಳಿಗೂ, ಉದ್ಯೋಗದಲ್ಲಿ ತೊಡಗಿಕೊಳ್ಳುವ ಕ್ಷೇತ್ರಕ್ಕೂ ಬಹುತೇಕ ಸಂದರ್ಭಗಳಲ್ಲಿ ಸಂಬಂಧವೇ ಇರುವುದಿಲ್ಲ. ಬಹುತೇಕ ಉದ್ಯೋಗಿಗಳಿಗೆ ಈ ಕುರಿತಾದ ಜಿಜ್ಞಾಸೆ ಇದ್ದೇ ಇದೆ. ಯಾವುದೋ ಒಬ್ಬ ವ್ಯಕ್ತಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉದ್ಯೋಗಿಯಾಗಿದ್ದಾನೆ ಎಂದಿಟ್ಟುಕೊಳ್ಳೋಣ. ಆತ ತನ್ನ ವಿದ್ಯಾರ್ಥಿ ಜೀವನದಲ್ಲಿ ಕನ್ನಡ ಸಾಹಿತ್ಯವನ್ನು ಒಂದು ವಿಷಯವಾಗಿ ಅಭ್ಯಸಿಸಿರುತ್ತಾನೆ. ಆದರೆ ಉದ್ಯೋಗದ ಯಾವುದೇ ಹಂತದಲ್ಲಿಯೂ ಕನ್ನಡ ಸಾಹಿತ್ಯ ಆತನ ಪ್ರಯೋಜನಕ್ಕೆ ಬರಲಾರದು. ಆತ ಕನ್ನಡ ಸಾಹಿತ್ಯವನ್ನು ಕಲಿತದ್ದರಿಂದ ದೊರೆತ ಲಾಭವಾದರೂ ಏನು? ಹೀಗೆ ಅನವಶ್ಯಕವಾದ ಅಧ್ಯಯನ ವಿಷಯಗಳನ್ನು ಪಠ್ಯಕ್ರಮದಲ್ಲಿ ಸೇರಿಸಿ, ಅಗತ್ಯ ಇಲ್ಲದವರೂ ಕಲಿಯುವಂತಹ ಅನಿವಾರ್ಯತೆ ಸೃಷ್ಟಿಸುವುದು ಸೂಕ್ತವಲ್ಲ. ಅದಕ್ಕೆ ಬದಲಾಗಿ ವಿದ್ಯಾರ್ಥಿಗಳು ಅಧ್ಯಯನದ ಸಂದರ್ಭದಲ್ಲಿಯೇ ತಮ್ಮ ಉದ್ಯೋಗದ ಆಯ್ಕೆಯನ್ನು ಮಾಡಿಕೊಳ್ಳಬೇಕು. ಇದರಿಂದಾಗಿ ಆ ಉದ್ಯೋಗಕ್ಕೆ ಸಂಬಂಧಪಟ್ಟ ಅಧ್ಯಯನ ವಿಷಯಗಳ ಕಡೆಗೆ ಗಮನ ಕೇಂದ್ರೀಕರಿಸಿ, ಮತ್ತಷ್ಟು ಆಳವಾಗಿ ಅಭ್ಯಸಿಸುವ ಅವಕಾಶ ವಿದ್ಯಾರ್ಥಿಗಳಿಗೆ ಒದಗಿಬರುತ್ತದೆ. ಆದರೆ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಇದು ಸಾಧ್ಯವಾಗದಿರುವುದರಿಂದ ಉದ್ಯೋಗಿಗಳ ಸಂಖ್ಯೆಗಿಂತಲೂ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಅಧಿಕಗೊಳ್ಳುತ್ತಿದೆ.

ಆಧುನಿಕ ಶಿಕ್ಷಣದಿಂದಾಗಿ ಹಲವಾರು ಪ್ರಯೋಜನಗಳೂ ಉಂಟಾಗಿವೆ. ವೈಚಾರಿಕ ಪ್ರಜ್ಞೆ, ಅಂತರ್‌ರಾಷ್ಟ್ರೀಯ ಸಂಪರ್ಕ ಮಾಧ್ಯಮ, ಸಾಂಸ್ಥಿಕ ಶಿಸ್ತು, ಸಮಾನ ಶಿಕ್ಷಣ ಪ್ರಜ್ಞೆ- ಇವುಗಳೆಲ್ಲವೂ ಆಧುನಿಕ ಶಿಕ್ಷಣದ ಕೊಡುಗೆಗಳು. ಆದರೆ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳ ಗರಿಷ್ಠ ಬೆಳವಣಿಗೆಗೆ ಇಂದಿನ ಶಿಕ್ಷಣ ವ್ಯವಸ್ಥೆ ಪೂರಕವಾಗಿಲ್ಲ ಎನ್ನುವುದೂ ಅಷ್ಟೇ ಸತ್ಯ.

ಹಾಗಿದ್ದರೆ ಪರಿಹಾರವೇನು? ಪ್ರಾಚೀನ ಶಿಕ್ಷಣ ವ್ಯವಸ್ಥೆಯನ್ನು ಅಪ್ರಸ್ತುತ ಎಂದು ಕಡೆಗಣಿಸುವ ಮನೋಭಾವವನ್ನು ಮೊದಲು ಬದಲಾಯಿಸಿಕೊಳ್ಳಬೇಕು. ಭಾರತದಲ್ಲಿ ಆಧುನಿಕ ಶಿಕ್ಷಣ ವ್ಯವಸ್ಥೆ ಜಾರಿಗೊಳ್ಳಲು ಕಾರಣಕರ್ತನಾದ ಲಾರ್ಡ್ ಮೆಕಾಲೆ ಕ್ರಿ.ಶ.1835ರಲ್ಲಿ ಬ್ರಿಟನ್ ಸಂಸತ್ತಿನಲ್ಲಿ ಮಾಡಿರುವ ಭಾಷಣದಲ್ಲಿ ಪ್ರಾಚೀನ ಶಿಕ್ಷಣ ವ್ಯವಸ್ಥೆಯ ಪ್ರಸ್ತಾಪವಿದೆ. ಮೆಕಾಲೆಯ ಮಾತುಗಳು ಹೀಗಿವೆ- 'ಭಾರತದುದ್ದಕ್ಕೂ ಪ್ರಯಾಣಿಸಿರುವ ನಾನು ಅಧಿಕ ಸಂಪತ್ತು, ಅಗಾಧ ಮೌಲ್ಯಪ್ರಜ್ಞೆ, ಅಂತಸ್ಸತ್ವಯುತರಾದ ಜನರನ್ನು ಕಂಡಿದ್ದೇನೆ. ಭಾರತದ ಬೆನ್ನೆಲುಬಾಗಿರುವ ಆಧ್ಯಾತ್ಮಿಕ- ಸಾಂಸ್ಕೃತಿಕ ಪರಂಪರೆಯನ್ನು ನಾಶಗೊಳಿಸುವವರೆಗೂ ನಾವು ಆ ದೇಶವನ್ನು ವಶಪಡಿಸಿಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ನನಗೆ ಅನ್ನಿಸುವುದಿಲ್ಲ. ಆದ್ದರಿಂದ ಭಾರತೀಯ ಪ್ರಾಚೀನ ಶಿಕ್ಷಣ ಪದ್ಧತಿಗೆ ಪರ್ಯಾಯವಾಗಿ ಇಂಗ್ಲಿಷ್ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸಬೇಕು. ಇದರಿಂದಾಗಿ ಭಾರತೀಯರು ಇಂಗ್ಲಿಷ್‌ನಲ್ಲಿರುವ ಎಲ್ಲವೂ ತಮ್ಮ ದೇಶಕ್ಕಿಂತ ಉತ್ತಮವಾದದ್ದು ಎಂಬ ಭಾವನೆ ಹೊಂದುವಂತಾಗುತ್ತದೆ. ಮಾತ್ರವಲ್ಲ, ತಮ್ಮ ಸ್ವಾಭಿಮಾನ, ದೇಸೀ ಸಂಸ್ಕೃತಿ ಎಲ್ಲವನ್ನೂ ಕಳೆದುಕೊಳ್ಳುತ್ತಾರೆ. ಈ ಮೂಲಕ ನಾವು ಬಯಸುವ ಗುಲಾಮಿ ರಾಷ್ಟ್ರ ನಿರ್ಮಾಣ ಸಾಧ್ಯವಾಗುತ್ತದೆ'. ಈ ರೀತಿಯಾದ ಮೆಕಾಲೆಯ ಮಾತುಗಳು ಎರಡು ವಿಚಾರಗಳನ್ನು ಸ್ಪಷ್ಟಪಡಿಸುತ್ತವೆ. ಮೊದಲನೆಯದು, ಭಾರತದ ಪ್ರಾಚೀನ ಶಿಕ್ಷಣ ಪದ್ಧತಿಯು ಇಲ್ಲಿನ ಜನರಲ್ಲಿ ಪ್ರಪಂಚವನ್ನೇ ನಿಬ್ಬೆರಗಾಗಿಸುವಷ್ಟರ ಮಟ್ಟಿನ ಸಂಸ್ಕಾರವನ್ನು ಮೂಡಿಸಿತ್ತು ಎನ್ನುವುದು. ಎರಡನೆಯ ವಿಚಾರವೆಂದರೆ, ಭಾರತೀಯರನ್ನು ಗುಲಾಮರನ್ನಾಗಿ ಮಾಡುವ ಉದ್ದೇಶದಿಂದಲೇ ಆಧುನಿಕ ಶಿಕ್ಷಣವನ್ನು ಜಾರಿಗೊಳಿಸಲಾಯಿತು. ವಿಪರ್ಯಾಸವೇನೆಂದರೆ, ಸ್ವಾಭಿಮಾನವನ್ನು ಉದ್ದೀಪಿಸುವ ಪ್ರಾಚೀನ ಶಿಕ್ಷಣ ವ್ಯವಸ್ಥೆ ನಮಗಿಂದು ಬೇಡವಾಗಿದೆ. ನಮ್ಮಲ್ಲಿನ ಆತ್ಮವಿಶ್ವಾಸವನ್ನು ಕೊಂದು ಗುಲಾಮಗಿರಿಗೆ ನಮ್ಮನ್ನು ತಳ್ಳುವ ಆಧುನಿಕ ಶಿಕ್ಷಣ ವ್ಯವಸ್ಥೆಯನ್ನು ಬಲವಾಗಿ ಅಪ್ಪಿಕೊಂಡಿದ್ದೇವೆ.

ದೇಶದ ಬಹುತೇಕ ಸಮಸ್ಯೆಗಳಿಗೆ ಪರಿಹಾರ ದೊರಕಬೇಕಾದರೆ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಿರುವುದು ಅನಿವಾರ್ಯ. ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿರುವ ಉತ್ತಮ ಅಂಶಗಳನ್ನು ಹಾಗೆಯೇ ಇರಿಸಿಕೊಳ್ಳಬೇಕು. ಪ್ರಾಚೀನ ಶಿಕ್ಷಣ ಪದ್ಧತಿಯಲ್ಲಿರುವ ಅನುಕರಣೀಯ ವಿಚಾರಗಳನ್ನು ಸ್ವೀಕರಿಸಬೇಕು. ಈ ಮೂಲಕ ನೂತನ ಶಿಕ್ಷಣ ಪದ್ಧತಿ ರೂಪುಗೊಳ್ಳುವಂತಾಗಬೇಕು. ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಬೇಕಾದ ಹೊಣೆ ಸರ್ಕಾರದ ಮೇಲಿದೆ. ಸರ್ಕಾರವು ಶಿಕ್ಷಣ ತಜ್ಞರ ಸಲಹೆಯನ್ನು ಪಡೆದುಕೊಂಡು ರಾಷ್ಟ್ರೀಯ ಶಿಕ್ಷಣ ನೀತಿಯೊಂದನ್ನು ರೂಪಿಸಬೇಕು. ಪ್ರಾಚೀನ ಶಿಕ್ಷಣ ವ್ಯವಸ್ಥೆಯಲ್ಲಿದ್ದ ಉತ್ತಮ ಅಂಶಗಳನ್ನು ಆಧಾರವಾಗಿರಿಸಿಕೊಂಡು ಪಠ್ಯಕ್ರಮ ಸಿದ್ಧಗೊಳ್ಳುವಂತಾಗಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಇಷ್ಟದ ಕ್ಷೇತ್ರದಲ್ಲಿಯೇ ಶಿಕ್ಷಣವನ್ನು ಪಡೆದು, ತಜ್ಞತೆಯನ್ನು ಗಳಿಸಿಕೊಳ್ಳುವಂತಾಗಬೇಕು.

ಕೋತಿಗಳನ್ನು ಕೊಳ್ಳುವವರು ಕಾಣದಂತೆ ಮಾಯವಾದರೋ?

ಕ್ಷಣ ಹೊತ್ತು ಆಣಿ ಮುತ್ತು

ಎಸ್.ಷಡಕ್ಷರಿ

editoped@vishwavani.news

ಒಂದೂರಿತ್ತು. ಆ ಊರಿನ ಬಹುತೇಕ ಜನ ಹೊಲ-ತೋಟಗಳಲ್ಲಿ, ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು. ಒಮ್ಮೆ ಅಲ್ಲಿಗೊಬ್ಬ ರಫ್ತು ವ್ಯಾಪಾರಿ ಬಂದರು. ವಿದೇಶವೊಂದರಲ್ಲಿ ನಮ್ಮ ದೇಶದ ಕೋತಿಗಳಿಗೆ ಅಪಾರವಾದ ಬೇಡಿಕೆ ಇದೆಯೆಂದೂ, ರಫ್ತುವ್ಯಾಪಾರಿಗಳಾದ ತಾವು ಕೋತಿಯೊಂದಕ್ಕೆ ಐವತ್ತು ರೂಪಾಯಿಯಂತೆ ಕೊಳ್ಳುವುದಾಗಿಯೂ ಪ್ರಚಾರ ಮಾಡಿದರು. ಊರಿನಲ್ಲಿ ಕೋತಿಗಳು ಬೇಕಾದಷ್ಟಿದ್ದವು! ಕೆಲಸಗಾರರು ಹೊಲ-ತೋಟಗಳಿಗೆ ಹೋಗುವುದನ್ನು ಬಿಟ್ಟರು. ಕೋತಿಗಳನ್ನು ಹಿಡಿಯುತ್ತಿದ್ದರು. ರಫ್ತುಗಾರರಿಗೆ ಮಾರುತ್ತಿದ್ದರು.

ಒಂದೆರಡೇ ದಿನಗಳಲ್ಲಿ ಕೆಲವರು ಸಾವಿರಾರು ರೂಪಾಯಿಗಳಿಸಿದರೆಂಬ ಸುದ್ದಿ ಕಾಡ್ಗಿಚ್ಚಿನಂತೆ ಊರಲ್ಲಿ ಹರಡಿತು. ಅದನ್ನು ಕೇಳಿ ಊರಿನವರೆಲ್ಲ ಅದೇ ಕೆಲಸ ಪ್ರಾರಂಭಿಸಿದರು. ಮೂರೇ ವಾರಗಳಲ್ಲಿ ಊರಿನಲ್ಲಿದ್ದ ಕೋತಿಗಳೆಲ್ಲ ರಫ್ತುಗಾರರ ಬೋನಿನಲ್ಲಿ ಸಿಕ್ಕಿಬಿದ್ದಿದ್ದವು.

ಕೆಲಸಗಾರರಿಗೆ ಸಾವಿರಾರು ರೂಪಾಯಿಗಳು ಸಿಕ್ಕಿದ್ದವು. ಆದರೆ ಊರಿನಲ್ಲಿ ಕೋತಿಗಳೇ ಇಲ್ಲವಾದವು. ಆಗ ರಫ್ತುದಾರರು ಪ್ರತಿ ಕೋತಿಗೆ ಒಂದು ನೂರು ರೂಪಾಯಿ ಕೊಡುವುದಾಗಿ ಹೇಳಿದರು.

ಕೆಲಸಗಾರರೆಲ್ಲ ಕಾಡಿನಿಂದ ಕೋತಿಗಳನ್ನು ಹಿಡಿದು ತಂದು ಮಾರತೊಡಗಿದರು. ಊರಿನವರಿಗೆಲ್ಲ ಇದೇ ಕಸುಬು! ಕೊನೆಗೆ ಕಾಡಿನಲ್ಲೂ ಕೋತಿಗಳಿಲ್ಲವಾದವು. ಜನ ಮತ್ತೆ ಹೊಲ-ತೋಟಗಳಿಗೆ ಕೆಲಸ ಹುಡುಕಿಕೊಂಡು ಹೊರಡಬೇಕೆನ್ನುವಷ್ಟರಲ್ಲಿ ರಫ್ತುದಾರರು ಕೋತಿಯೊಂದಕ್ಕೆ ಇನ್ನೂರು ರೂಪಾಯಿ ಕೊಡುವುದಾಗಿ ಹೇಳಿದರು.

ಜನ ಕಾಡುಮೇಡುಗಳನ್ನೆಲ್ಲ ಸುತ್ತತೊಡಗಿದರು. ಕೋತಿಗಳನ್ನು ಹುಡುಕಿ ತರತೊಡಗಿದರು. ಆದರೆ ಅಲ್ಲೂ ಕೋತಿಗಳು ಕಡಿಮೆಯಾಗತೊಡಗಿದವು. ಸುತ್ತಮುತ್ತಲ ಊರಿನ, ಕಾಡಿನ ಕೋತಿಗಳು ರಫ್ತುದಾರರ ಬೋನಿನಲ್ಲಿ ಬಂಧಿಗಳಾಗಿದ್ದವು.

ಆಗ ರಫ್ತುದಾರರು ಕೋತಿಗೊಂದು ಸಾವಿರ ರೂಪಾಯಿ ಕೊಡುವುದಾಗಿಯೂ, ತಾವು ವಿದೇಶಕ್ಕೆ ಹೋಗಿ ಬರುತ್ತಿರುವುದರಿಂದ ತಮ್ಮ ಸಹಾಯಕನೇ ಸಾವಿರ ರೂಪಾಯಿ ಕೊಟ್ಟು ಕೋತಿಗಳನ್ನು ಕೊಳ್ಳುತ್ತಾನೆಂದು ಪ್ರಚಾರಮಾಡಿ ಹೊರಟುಹೋದರು.

ಸಹಾಯಕ ಒಂದೆರಡು ದಿನ ಸಾವಿರ ರೂಪಾಯಿಯಂತೆ ಒಂದೆರಡು ಕೋತಿಗಳನ್ನು ಕೊಂಡುಕೊಂಡ. ಆನಂತರ ಒಂದೆರಡು ದಿನ ಸುಮ್ಮನಿದ್ದ. ನಂತರ ತನ್ನ ಖರ್ಚಿಗೆ ಹಣ ಸಾಲದೆ ಬಂದಿರುವುದರಿಂದ ಬೋನಿನಲ್ಲಿರುವ ಕೆಲವು ಕೋತಿಗಳನ್ನು ಐನೂರು ರೂಪಾಯಿಗೊಂದರಂತೆ ಮಾರುವುದಾಗಿಯೂ, ಹಾಗೆ ಕೊಳ್ಳುವವರು ತಮ್ಮ ಸಾಹುಕಾರರು ಬಂದ ನಂತರ ಅವರಿಗೆ ಕೋತಿಗೆ ಸಾವಿರ ರೂಪಾಯಿಯಂತೆ ಮಾರಿ ನೂರರಷ್ಟು ಲಾಭ ಪಡೆಯಬಹುದೆಂದು ಗುಟ್ಟಾಗಿ ಕೆಲವರಿಗೆ ಹೇಳಿದ.

ಆ ಕೆಲವರು ತಮ್ಮಲ್ಲಿದ್ದ ಹಣವನ್ನೆಲ್ಲ ಕೊಟ್ಟು ಒಬ್ಬೊಬ್ಬರೂ ಹತ್ತಿಪ್ಪತ್ತು ಕೋತಿಗಳನ್ನು ಕೊಂಡು ಇಟ್ಟುಕೊಂಡರು. ವ್ಯವಹಾರವೆಲ್ಲ ಗುಟ್ಟಾಗಿ ನಡೆಯುತಿತ್ತು. ಆದರೆ ಕೋತಿಗಳ ಸಂತೆಯಲ್ಲಿ ಗುಟ್ಟು ಗುಟ್ಟಾಗಿ ಉಳಿಯಲಿಲ್ಲ. ಉಳಿದವರೂ ತಮ್ಮಲ್ಲಿದ್ದ ಹಣ ತಂದರು. ತಮ್ಮ ಹೆಂಡತಿಯರ ತಾಳಿಗಳನ್ನು ಅಡವಿಟ್ಟರು. ಮಾರಿದರು. ಹಣ ತಂದರು. ಕೋತಿಗೆ ಐನೂರು ರೂಪಾಯಿಯಂತೆ ಕೊಂಡುಕೊಂಡರು. ಮೂರು ತಿಂಗಳಿಂದ ರಫ್ತುದಾರರ ಬೋನಿನಲ್ಲಿದ್ದ ಕೋತಿಗಳು ಮೂರು ದಿನಗಳಲ್ಲಿ ಊರಿನ ಜನರ ಬಳಿ ಸೇರಿದ್ದವು.

ಹಣವೆಲ್ಲ ಸಹಾಯಕನ ಬಳಿ ಸೇರಿತ್ತು. ಏನಾಯಿತೋ ಏನೋ, ಆತ ಇದ್ದಕ್ಕಿದ್ದಂತೆ ಊರಿನಿಂದ ಕಾಣದಂತೆ ಮಾಯವಾದ. ರಫ್ತುದಾರನೂ ಪತ್ತೆಯೇ ಇಲ್ಲ! ಈಗ ಊರಿನ ತುಂಬಾ ಎಲ್ಲರ ಬಳಿಯೂ ಕೋತಿಗಳು, ಸಾರ್, ಕೋತಿಗಳು! ಎಲ್ಲ ಜನರದ್ದೂ ಖಾಲಿ ಕೈಗಳು! ಮೈತುಂಬಾ ಸಾಲಗಳು! ರಫ್ತುದಾರರಿಗಾಗಿ ಕಾಯುತ್ತಿರುವ ಜನರ ತಲೆಗಳು! ಅದರ ತುಂಬಾ ಕನಸುಗಳು!

ಮುಂದೆ ಆ ಊರಿನ ಜನರ ಗತಿ ಏನಾಯಿತೆಂದು ನಾವು ಊಹಿಸಬಹುದು! ಈ ಕತೆಯು ಹತ್ತಾರು ವರ್ಷಗಳ ಹಿಂದೆ ಅಂತರ್ಜಾಲದಲ್ಲಿ ಸಂಚಲನೆಯಲ್ಲಿತ್ತು. ಇದನ್ನು ಬರೆದ ಅಜ್ಞಾತ ಪುಣ್ಯಾತ್ಮರು ಏರುತ್ತಲೇ ಹೋಗುವ ಶೇರುಮಾರುಕಟ್ಟೆಗಳು, ಹಣಕಾಸಿನ ಸಂಸ್ಥೆಗಳು ಇದ್ದಕ್ಕಿದ್ದಂತೆ ಒಂದು ದಿನ ಮುಗ್ಗರಿಸಿ ಬಿದ್ದು ಬಂಡವಾಳ ಹೂಡಿದವರ ಬೆನ್ನೆಲುಬು ಮುರಿಯುವುದೂ ಹೀಗೇನಾ? ಎಂದು ಪ್ರಶ್ನಿಸುತ್ತಾರೆ! ಅವರಿಗೆ ವಂದಿಸೋಣ! ನಾವು ಕೋತಿಗಳನ್ನು ಕೊಂಡು ಮಾರುವ ವ್ಯವಹಾರಕ್ಕೆ ಹೋಗದಿರೋಣ! ಹಾಗೇನಾದರೂ ಹೋದರೆ ನಮ್ಮ ಊರಿನ ತುಂಬ ಕೋತಿಗಳು, ಸಾರ್, ಕೋತಿಗಳು ಆದೀತು!